# -: ವಾರ್ಡ್ ಸಮಿತಿ ಸಭೆ :-

# ದಿನಾಂಕ: 20.02.2021

ವಿಷಯ: ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 20.02.2021 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ರಾಜಶೇಖರ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ವಿ. ತಿಮ್ಮಪ್ಪ, ತೋಟಗಾರಿಕೆ ನಿರೀಕ್ಷಕರು
4. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
5. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಹೆಚ್. ರಮೇಶ್ ಸಹಾಯಕ ಇಂಜಿನಿಯರ್ (ಬೆಸ್ಕಾಂ)
7. ಶ್ರೀ ಗಂಗಚಲುವಯ್ಯ (ಬಿ.ಡಬ್ಲ್ಯೂ.ಎಸ್.ಎಸ್.ಬಿ.)

ಶ್ರೀ ವಿ.ಆರ್. ಕೃಷ್ಣಪ್ಪ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಮಾನ್ಯ ಸಚಿವರಿಂದ ಬಂದಿರುವ ಒಂಟಿ ಮನೆ ನಿರ್ಮಾಣ ಯೋಜನೆಯ ಫಲಾನುಭವಿಗಳಾದ
   1) ಗಂಗಾಧರ್ ಎಂ., 2) ರವಿಶಂಕರ್ ಕೆ.ಎಲ್. (3) ಮಂಜುನಾಥ ಶೆಣೈ (4) ಎ.ಆರ್. ಷಣ್ಮುಗಂ (5) ಆರ್. ವೆಂಕಟೇಶ್ (6) ಎಸ್. ತೇಜಸ್ ಇವರ ಒಂಟಿ ಮನೆ ನಿರ್ಮಾಣ ಯೋಜನೆಯ ಅರ್ಜಿಗಳನ್ನು ಪ್ರಸ್ಥಾವನೆಯೊಂದಿಗೆ ಮಂಜೂರಾತಿಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.
2. 2021-22ನೇ ಸಾಲಿನ ಆಯ-ವ್ಯಯದಲ್ಲಿ POW ಕಾರ್ಯಕ್ರಮಗಳ ಪಟ್ಟಿಯನ್ನು ರೂ. 200.00 ಲಕ್ಷಗಳಿಗೆ Norms ಪ್ರಕಾರ ಕಾಮಗಾರಿವಾರು ನಿಗದಿಪಡಿಸಿ ಕ್ರಿಯಾ ಯೋಜನೆ ತಯಾರಿಸಲು ತೀರ್ಮಾನಿಸಲಾಯಿತು.
3. ಬಿ.ಬಿ.ಎಂ.ಪಿ. ಕಟ್ಟಡಗಳ ನಿರ್ವಹಣೆಗೆ ರೂ. 10.00 ಲಕ್ಷಗಳ ಮೊತ್ತಕ್ಕೆ House keeping & Manpower ಒದಗಿಸಲು ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸಿಕೊಳ್ಳಲು ತೀರ್ಮಾನಿಸಲಾಯಿತು.
4. ಸ್ವಿಮ್ಮಿಂಗ್ ಪೂಲ್ ರಸ್ತೆಯಲ್ಲಿ ಕೆಟ್ಟುನಿಂತಿರುವ ವಾಹನಗಳು ಮತ್ತು ಇತರೆ ನಿಯಮ ಮೀರಿ ನಿಲ್ಲಿಸಿರುವ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲು ಟ್ರಾಫಿಕ್ ಪೋಲೀಸ್ ಠಾಣೆ, ರಾಜಾಜಿನಗರ ರವರಿಗೆ ತಿಳಿಸಲು ತೀರ್ಮಾನಿಸಲಾಯಿತು.

. . . . . 2

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿಗಳು,**
**ವಾರ್ಡ್ ನಂ. 68 ಮಹಾಲಕ್ಷ್ಮೀಪುರ**

**ಅಧ್ಯಕ್ಷರು**
**ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 68,**
**ಮಹಾಲಕ್ಷ್ಮೀಪುರ**